◆ **ಅದರಿಂದ ಒಳ್ಳೇದೂ ಆಗ್ಯಾದಲ್ಲಮ್ಮ. ಬ್ಯಾಂಕಿಗೆ ಹೋಗದು ತಪ್ಪ್ಯಾದ, ಟಾಕೀಸಿಗೆ ಹೋಗದೂ ತಪ್ಪ್ಯಾದ.**

ಹಂಗಾಗೇ ಬ್ಯಾಂಕಿನ್ಯಾಗಿನ ಎಷ್ಟೋ ರಕ್ಕ ಹೊಡಕಂಡು ಹೋಗ್ಯಾವ ನೋಡ್ರಿ. ಅದು ನಮಗ ಸಹಾಯ ಎಷ್ಟು ಮಾಡ್ಯಾದೋ ನಮ್ಮ ಬುದ್ಧಿನ್ನ ಅದಕ್ಕಿಂತ ಹೆಚ್ಚು ಕೆಡಿಸ್ಯಾದ. ಆವಾಗ ಮನುಷ್ಯನ ಕುಡ ಸುದ್ದಿ ಕಳಸ್ತಿದ್ರು. ಆಮ್ಯಾಲೆ ಪತ್ರನಾದ್ರೂ ಬರೀತಿದ್ರು. ಈಗ ಎಲ್ಲ ಫೋನಿನ್ಯಾಗೇ. ಎಲ್ಲ ಒಂದ್ರುಪಾಯದಾಗೇ.

ಈ ಮೊಬೈಲಿನ್ಯಾಗ ಒಳ್ಳೆಯವರ್ಯಾರೋ ಕೆಟ್ಟವರ್ಯಾರೋ... ಎಷ್ಟು ಸೌಲತ್ತಿದ್ರೂ ಇದೊಂದು ಅಸಹ್ಯ ಅನಸುತ್ರೀ. ಇನ್ನ ಟೀವಿ ಅಂಬದೊಂದು ಮನಿಮನ್ಯಾಗ ಬಂದು ಕುಂತಾದ. ಈಗಿನವರು ಎಲ್ಲ ಧಾರಾವಾಹಿ ನೋಡಕ ಕಲ್ತುಬುಟ್ಟಾರ್ರೀ. ಆ ಸೀರಿಯಲ್ ಸಲುವಾಗಿ ಆರು ಗಂಟೆಗೇ ಅಡಿಗಿ ಮಾಡಿಟ್ಟು ಒಂಬತ್ತರ ತನಕ ಟೀವಿ ನೋಡಿ, ಮಾಡಿಟ್ಟಿದ್ದ ಅಡಿಗಿ ತಣ್ಣಗಾದ ಮ್ಯಾಲೆ ಉಣತಾರ್ರೀ... ಏನ ಹೇಳತೀರಿ? ನನ್ನ ಗಂಡ ಊಟಕ್ಕ ಕುಂತರೆ ರೊಟ್ಟಿ ಹಂಚು ಇಡತಿದ್ವಿ. ಊರಿಗಿ ಹೋಗ್ತೀನಂದ್ರೆ ರಾತ್ರಿ ಬೆಳಗಾನ ಎದ್ದು ರೊಟ್ಟಿ ಬುತ್ತಿ ಮಾಡಿ ಕಟ್ತಿದ್ವಿ.

◆ **ಈಗ ಮಕ್ಕಳು ಮೊಮ್ಮಕ್ಕಳು ಓದಿಕ್ಯಂಡಾರ. ನೌಕರಿ ಮಾಡ್ತಾರ. ಈ ಹಾಡಿಕೆಯನ್ನು ಅವರು ಯಾರನ್ನ ಕಲ್ತಾರಾ?**

ಕಲ್ಯಾಕ ರೆಡಿ ಇಲ್ರಿ. ಕಲ್ತುಕೊಂಡವ್ರು ಹಾಡಾಕ ರೆಡಿ ಇಲ್ಲ. ನಾನು ಹಾಡಿದ್ರೆ ಅವರು ಹೊರಗ ಹೋಗ್ತಾರ್ರಿ. ಅವರು ನನ್ನ ಜತಿಗಿ ದನಿ ಗೂಡ ಕೂಡಸದಿಲ್ಲ. ನನಗ ನಾಕು ಮಂದಿ ಮಕ್ಕಳ್ರಿ – ಎರಡು ಹೆಣ್ಣು, ಎರಡು ಗಂಡು. ಮೂವರ ಮದಿವಿ ಆಗ್ಯಾದ. ಮಗ ಈಶಪ್ಪ ಭಜನಿ ಪದ ಹಾಡ್ತಾನ್ರಿ. ಅತ ಒಬ್ಬತನೇ ಕಲ್ತುಕಂಡಾನ. ಚೊಲೋ ಹಾಡ್ತಾನ.

ಮೊದಲು ನಾನು ಹಾಡಿದ್ರೆ ಊರಿಗೇ ಕೇಳಸ್ತಿತ್ತು. ಈಗ ವಯಸ್ಸಾಯ್ತು. ಒಂದು ಕಣ್ಣು ಸ್ವಲ್ಪ ಮಂಜಾಗ್ಯಾದ. ಕಿವಿ ಸ್ವಲ್ಪ ಮಂದ ಆಗ್ಯಾವ್ರೀ. ಭಜನಿ ಪದಗಳನ್ನಂತೂ ಮಗ ಕಲ್ತುಕಂಡಾನ. ಇನ್ನ ಉಳುದ ಹಾಡುಗಳ ಕಥೆ ಅಷ್ಟೇರಿ. ನಾವು ಹೋದ ಮ್ಯಾಲೆ ಆಯ್ತು ನಮ್ಜತಿಗೇ ಮುಣಿಗಿಬುಡ್ತಾವ.


## ಚಿದಾನಂದ ಸಾಲಿ

ರಾಯಚೂರು ಜಿಲ್ಲೆಯವರಾದ ಚಿದಾನಂದ ಸಾಲಿ ಕನ್ನಡದ ಮುಂಚೂಣಿಯ ಲೇಖಕರು. ಗಣಿತಶಾಸ್ತ್ರ, ಪತ್ರಿಕೋದ್ಯಮ, ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರ. 'ರೆ', 'ಮೌನ', 'ಧರೆಗೆ ನಿದ್ರೆಯು ಇಲ್ಲ', 'ಚೌಕಟ್ಟಿನಾಚೆ', 'ಶಿಕ್ಷಣ ಮತ್ತು ಜೀವನಶೈಲಿ', 'ಕಾಲಕನ್ನಡಿ', 'ಕರುಳ ತೆಪ್ಪದ ಮೇಲೆ', 'ಕಡಲಹಕ್ಕಿಯ ರೆಕ್ಕೆ', 'ಕನ್ನಡ ಗಜಲ್' ಸೇರಿದಂತೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಎಲೆಯುದುರೂ ಕಾಲ', 'ಕಾಲಸಾಕ್ಷಿಯಾಗಿ', 'ಯಜ್ಞ', 'ಮೋಹನಾ ಓ ಮೋಹನಾ!', 'ನೀಲಿ ಸರೋವರ', 'ಲೀಲಾಳ ಚಮತ್ಕಾರ' ಅವರ ಅನುವಾದಿತ ಪುಸ್ತಕಗಳು.